ಸಿನಿಮಾ ಲೋಕಕ್ಕೆ ಕಾಲಿಟ್ಟಿದ್ದ ಅವರಿಗೆ ಸವಾಲಾಗಿದ್ದು ಭಾಷೆ. ಅಪ್ಪಟ ಮಂಗಳೂರು ಭಾಷೆ ಮಾತಾಡುತ್ತಿದ್ದ ಅವರಿಗೆ ಸಿನಿಮಾದಲ್ಲಿ ಬೇರೆ ಶೈಲಿಯಲ್ಲಿ ಮಾತಾಡಬೇಕಾಗಿದ್ದು ಮೊದಮೊದಲು ತುಂಬಾ ಕಷ್ಟವಾಗಿತ್ತು. ಅದನ್ನೇ ಸವಾಲಾಗಿ ತೆಗೆದುಕೊಂಡು ಒಂದು ತಿಂಗಳಲ್ಲೇ ಭಾಷೆ ಕಲಿತು ಡಬ್ ಕೂಡ ಆರಾಮಾಗಿ ಮಾಡಿದರು.

‘ಗಿರಿಗಿಟ್ಲೆ’ ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಲು ಅವಕಾಶ ಸಿಕ್ಕಿದ್ದು ಸಿನಿಮಾದೆಡೆಗೆ ಅದ್ವಿತಿ ಅವರಿಗಿದ್ದ ಆಸೆಗೆ ಮತ್ತಷ್ಟು ನೀರೆರೆದಿತ್ತು. ‘ಗಿರಿಗಿಟ್ಲೆ’, ‘ಕಾರ್ಮೋಡ ಸರಿದು’ ಸಿನಿಮಾಗಳು ಅವರ ನಟನಾ ಸಾಮರ್ಥ್ಯವನ್ನು ಹೊರತರಲು ಒಂದೊಳ್ಳೆಯ ವೇದಿಕೆಯೂ ಆದವು. ಸಿನಿಮಾಗಳ ಜೊತೆಜೊತೆಗೆ ಮೂರು ಆಲ್ಬಂ ಸಾಂಗ್‌ನಲ್ಲಿಯೂ ಕಾಣಿಸಿಕೊಂಡರು.

ಈ ಮಧ್ಯೆ ಕಿರುಚಿತ್ರವೊಂದರಲ್ಲೂ ಅಭಿನಯಿಸಿದ ಅದ್ವಿತಿ, ಕಿರುತೆರೆಯಲ್ಲಿ ಕೂಡ ತಮ್ಮ ಅದೃಷ್ಟ ಪರೀಕ್ಷೆಗಿಳಿದರು. ‘ಎರಡು ಕನಸು’ ಎಂಬ ಧಾರಾವಾಹಿಯಲ್ಲಿ ನಟಿಸಿದ್ದು, ಅವರಿಗೆ ಸಣ್ಣತೆರೆಯ ಮೂಲ ಪಾಠಗಳನ್ನು ತಿಳಿದುಕೊಳ್ಳಲು ಸಹಾಯ ಮಾಡಿತು.

ಧಾರಾವಾಹಿಯಲ್ಲಿ ನಟಿಸುತ್ತಿದ್ದ ಸಮಯದಲ್ಲೇ, ಮತ್ತೊಂದು ಸಿನಿಮಾ ಅವಕಾಶ ಅವರನ್ನು ಕೈಬೀಸಿ ಕರೆಯಿತು. ಧಾರಾವಾಹಿ ಹೀರೊ ಹಾಗೂ ಅಭಿಮಾನಿ ಹುಡುಗಿಯೊಬ್ಬಳ ನಡುವಿನ ಪ್ರೇಮಕಥೆಯಾದ ‘ಫ್ಯಾನ್’ ಸಿನಿಮಾದಲ್ಲಿ ನಾಯಕಿ ಪಾತ್ರದಲ್ಲಿ ನಟಿಸಿದರು ಅದ್ವಿತಿ. ಆದರೆ ಸಾಕಷ್ಟು ಶ್ರಮ ಹಾಕಿದ್ದ, ಭಾರೀ ನಿರೀಕ್ಷೆ ಮೂಡಿಸಿದ್ದ ಈ ಸಿನಿಮಾ, ಥಿಯೇಟರ್ ದೊರೆಯದೇ ಸೋಲು ಕಂಡಿತು. ಆ ಸೋಲು, ಸಿನಿಮಾರಂಗದ ಮೇಲಿನ ನಂಬಿಕೆಗೆ ಪೆಟ್ಟು ನೀಡಿತ್ತು.

‘ಆ ಸಿನಿಮಾ ಬಗ್ಗೆ ನಾನು ತುಂಬಾ ನಿರೀಕ್ಷೆ ಇಟ್ಟುಕೊಂಡಿದ್ದೆ. ನನ್ನ ನಟನೆಗೆ ಒತ್ತು ಕೊಟ್ಟಿದ್ದ ಸಿನಿಮಾ ಸೋಲುತ್ತಿದ್ದಂತೆ, ಒಂದಷ್ಟು ದಿನ ಅವಕಾಶಗಳೂ ಇಲ್ಲದಾಯಿತು. ಇನ್ನು ಚಿತ್ರರಂಗ ಬೇಡವೇ ಬೇಡ ಎಂದು ನಿರ್ಧರಿಸಿ ವಾಪಸ್ಸಾಗಲು ಹೊರಟಿದ್ದೆ. ಆದರೆ ಅದೇ ಸಮಯದಲ್ಲಿ ‘ಧೀರಸಾಮ್ರಾಟ’ ಸಿನಿಮಾ ಹುಡುಕಿಕೊಂಡು ಬಂತು. ಮತ್ತೆ ನನ್ನಲ್ಲಿ ಹುರುಪು ತುಂಬಿತು’ ಎಂದು ತಮ್ಮ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ ಅದ್ವಿತಿ.

ಹೊಸಬರಾದವರು ಏಕತಾನತೆಯ ಪಾತ್ರಗಳಿಂದ ದೂರವುಳಿಯಬೇಕು ಎಂಬ ಕಿವಿಮಾತನ್ನೂ ಹೇಳುತ್ತಾರೆ ಅವರು. ‘ಒಂದು ಸಿನಿಮಾದಲ್ಲಿ ಅಭಿನಯಿಸುತ್ತಿದ್ದಂತೆ, ಅದೇ ರೀತಿಯ ಪಾತ್ರಗಳು ಮತ್ತೆ ಮತ್ತೆ ಬರುತ್ತಿರುತ್ತವೆ. ಹೊಸಬರಲ್ಲಿನ ಸಾಮರ್ಥ್ಯವನ್ನು ಅವು ಸೀಮಿತಗೊಳಿಸಿಬಿಡುತ್ತವೆ. ನಾನು ಈ ಒಂದು ಮನೋಭಾವವನ್ನು ಒಪ್ಪುವುದಿಲ್ಲ. ಹೊಸಬರಿಗೆ ಅವರ ಸಾಮರ್ಥ್ಯ ನಿರೂಪಿಸುವಂಥ ಪಾತ್ರಗಳನ್ನು ನೀಡಬೇಕು. ಪಾತ್ರ ಚಿಕ್ಕದಾದರೂ ಅದಕ್ಕೆ ಮಾನ್ಯತೆ ಇರಬೇಕು’ ಎನ್ನುತ್ತಾರೆ.

‘ಪರ್ಫಾರ್ಮೆನ್ಸ್ ಆಧಾರಿತ ಸಿನಿಮಾ’ ತಮ್ಮ ಆದ್ಯತೆಯಲ್ಲಿ ಯಾವಾಗಲೂ ಮುಂದಿರುತ್ತದೆ ಎನ್ನುತ್ತಾರೆ. ‘ನಮ್ಮನ್ನು ಸಂಪೂರ್ಣವಾಗಿ ತೊಡಗಿಕೊಳ್ಳುವಂತೆ ಮಾಡುವಂಥ ಪಾತ್ರ ಅದಾಗಿರಬೇಕು. ಅಂಥ ಪ್ರೇರಣೆಯನ್ನು ಆ ಪಾತ್ರ ನೀಡಬೇಕು. ಈ ನಿಟ್ಟಿನಲ್ಲಿ ದೊರೆತ ಅವಕಾಶಗಳನ್ನು ಎಂದಿಗೂ ಕೈಚೆಲ್ಲಬಾರದು. ಅಂಥ ಪಾತ್ರವೊಂದರ ನಿರೀಕ್ಷೆ ಎಂದಿಗೂ ಇದ್ದೇ ಇರುತ್ತದೆ’ ಎಂದು ಹೇಳುತ್ತಾರೆ.

ಸದ್ಯ ಅದ್ವಿತಿ ಶೆಟ್ಟಿ ಅಭಿನಯದ ‘ಶುಗರ್ ಫ್ಯಾಕ್ಟರಿ’, ‘ಐರಾವನ್’, ‘ಧೀರಸಾಮ್ರಾಟ್’, ‘ಬ್ರಹ್ಮಕಮಲ’ ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿವೆ. ‘ಕ್ಯಾಡ್‌ಬರೀಸ್’ ಹಾಗೂ ‘ರೇಸರ್’ ಚಿತ್ರೀಕರಣ ಪೂರ್ಣಗೊಳ್ಳುವ ಹಂತದಲ್ಲಿದ್ದು, ಕೆಲವೇ ದಿನಗಳಲ್ಲಿ ಸೆಟ್ಟೇರಲಿದೆ.

ಇಂಡೊ–ಸಿಂಗಪುರ್ ಫಿಲ್ಮ್ ಫೆಸ್ಟ್‌ನಲ್ಲಿ ‘ಬ್ರಹ್ಮಕಮಲ’ ಸಿನಿಮಾದಲ್ಲಿನ ನಟನೆಗೆ, ‘ಅತ್ಯುತ್ತಮ ನಟಿ’ ಪ್ರಶಸ್ತಿ ದಕ್ಕಿರುವುದು ಅದ್ವಿತಿ ಆತ್ಮವಿಶ್ವಾಸವನ್ನು ದುಪ್ಪಟ್ಟುಗೊಳಿಸಿದೆ. ಈಚೆಗೆ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿಯೂ ಸಿನಿಮಾ ಮೆಚ್ಚುಗೆ ಪಡೆದುಕೊಂಡಿದೆ. ಈ ಮೆಚ್ಚುಗೆಗಳೇ ಅವರಲ್ಲಿ ಸಿನಿಮಾ ಬಗೆಗಿನ ಮತ್ತಷ್ಟು ಕನಸುಗಳನ್ನು ಅರಳಿಸುತ್ತಿವೆ. ■

# ಹೊಸ ಹಾದಿಯ ಸಾತ್ವಿಕಾ

ಕಳೆದ ಐದಾರು ವರ್ಷಗಳಿಂದ ಸಿನಿಮಾರಂಗದಿಂದ ದೂರವುಳಿದಿದ್ದ ನಟಿ ಶ್ರಾವ್ಯಾ ರಾವ್, ತಮ್ಮ ಹೊಸ ಹೆಸರಿನೊಂದಿಗೆ ರೀಎಂಟ್ರಿ ಕೊಟ್ಟಿದ್ದಾರೆ.

‘ಹುಚ್ಚ 2’ ಸಿನಿಮಾ ನಂತರ ಚಿತ್ರರಂಗದಿಂದ ಮರೆಯಾಗಿದ್ದ ಶ್ರಾವ್ಯಾ, ಇದೀಗ ಸಾತ್ವಿಕಾ ರಾವ್ ಆಗಿ ಹೆಸರು ಬದಲಿಸಿಕೊಂಡಿದ್ದು, ಮೂರು ಸಿನಿಮಾಗಳೊಂದಿಗೆ ಮರಳಿದ್ದಾರೆ.

ಕನ್ನಡ ಸಿನಿಮಾ ನಿರ್ದೇಶಕ ಓಂಪ್ರಕಾಶ್ ರಾವ್, ರೇಖಾದಾಸ್ ಮಗಳಾದ ಸಾತ್ವಿಕಾ, ಸದ್ಯ ವಿಭಿನ್ನ ನೆಲೆಯ ಪಾತ್ರಗಳಿಗೆ ಬಣ್ಣ ಹಚ್ಚುತ್ತಿರುವುದಾಗಿ ತಿಳಿಸಿದ್ದಾರೆ. ಹೆಸರು ಬದಲಿಸಿಕೊಂಡಿದ್ದರ ಕುರಿತು ಮಾತನಾಡುತ್ತಾ, ‘ಸಿನಿಮಾವೊಂದರ ಪ್ರೊಮೋಷನ್ ಸಂದರ್ಭ ಸುದೀಪ್ ಅವರನ್ನು ಭೇಟಿ ಮಾಡಿದ್ದೆ. ಆಗ ಅವರು ಸಾತ್ವಿಕಾ ಎಂಬ ಹೆಸರು ಸಲಹೆ ನೀಡಿದ್ದರು. ಅದೇ ಹೆಸರನ್ನು ಇಟ್ಟುಕೊಂಡಿದ್ದೇನೆ’ ಎಂದಷ್ಟೇ ಹೇಳಿದ್ದಾರೆ.

‘‘ಹುಚ್ಚ 2’ ಸಿನಿಮಾ ನಂತರ ಏಕೆ ಸಿನಿಮಾಗಳು ಬರಲಿಲ್ಲ ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಕೊರೊನಾ ಕಾರಣ ಒಂದಷ್ಟು ಸಮಯ ಚಿತ್ರೀಕರಣ ನಡೆದಿರಲಿಲ್ಲ. ಈ ವರ್ಷ ಎಲ್ಲವೂ ಬದಲಾಗುವ ಭರವಸೆಯಿದೆ’’ ಎಂದು ಹೇಳಿದ್ದಾರೆ. ಜೊತೆಗೆ, ಬೇರೆ ಬೇರೆ ರೀತಿಯ ಪಾತ್ರಗಳು ತಮ್ಮನ್ನು ಹುಡುಕಿಕೊಂಡು ಬರುತ್ತಿರುವುದರ ಕುರಿತು ತುಂಬಾ ಸಂತಸ ವ್ಯಕ್ತಪಡಿಸಿದ್ದು, ಇವೆಲ್ಲಾ ‘ಔಟ್ ಆಫ್ ದಿ ಬಾಕ್ಸ್’ನಂಥ ಪಾತ್ರಗಳು ಎಂದಿದ್ದಾರೆ.

‘ನಾನು ಸಿನಿಕುಟುಂಬದಿಂದ ಬಂದವಳು ಎಂದುಕೊಂಡಿಲ್ಲ. ಈ ಕ್ಷೇತ್ರಕ್ಕೆ ನಾನು ಹೊರಗಿನವಳು ಎಂದೇ ಭಾವಿಸಿದ್ದೇನೆ. ಇಲ್ಲದಿದ್ದರೆ ನನ್ನ ಮೇಲೆ ನಾನು ಒತ್ತಡ ಹೇರಿಕೊಂಡಂತಾಗುತ್ತದೆ. ಆ ಭಾರ ಹೊರಲು ನನಗೆ ಇಷ್ಟವಿಲ್ಲ’ ಎಂದಿದ್ದಾರೆ.

ತಮ್ಮ ಸಿನಿಮಾ ಜೀವನದಲ್ಲಿನ ಏಳುಬೀಳಿನ ಕುರಿತು ಮಾತನಾಡಿರುವ ಅವರು, ‘ಸಿನಿಮಾವೊಂದಕ್ಕೆ ನನ್ನಿಂದ ಸಾಧ್ಯವಿರುವಂಥ ಎಲ್ಲ ಶ್ರಮ ಹಾಕಿದರೂ ನಿರೀಕ್ಷಿಸಿದ ಫಲ ಸಿಗುವುದಿಲ್ಲ. ಕೆಲವು ಬಾರಿ, ಸಂದರ್ಭ ನಮ್ಮ ಪರವಾಗಿಲ್ಲ ಎಂದರೆ ಭರವಸೆ ಕಳೆದುಕೊಳ್ಳಬಾರದು. ಇದೇ ನನ್ನನ್ನು ಇಲ್ಲಿವರೆಗೂ ಕರೆದುಕೊಂಡು ಬಂದ ಮನೋಭಾವ’ ಎಂದು ಹೇಳಿದ್ದಾರೆ.

‘ಅಥಿ ಐ ಲವ್ ಯೂ’, ‘ಮೋಡ ಕವಿದ ವಾತಾವರಣ’ ಸಿನಿಮಾಗಳಲ್ಲಿ ಸಾತ್ವಿಕಾ ಕಾಣಿಸಿಕೊಳ್ಳಲಿದ್ದಾರೆ. ■

